## <u>ಅಸಲು ದಾವಾ ಸಂಖ್ಯೆ: 08/2017</u> ಪಿ.ಡಬ್ಲ್ಯೂ - 1

ದಿನಾಂಕಃ 25.10.2022 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಜಿ.ಎಸ್ ವಕೀಲರಿಂದ**

ನಾನು ಎಸ್.ಎಸ್.ಎಲ್.ಸಿ ವರೆಗೆ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುತ್ತದೆ ಆದರೆ ಅರ್ಥವಾಗುವುದಿಲ್ಲ. ದಾವಾಸ್ತಿಗಳು ನನ್ನ ತಾತನಿಂದ ತಂದೆಗೆ ಬಂದು, ನನ್ನ ತಂದೆಯಿಂದ ನನಗೆ ಬಂದಿರುತ್ತದೆ. ನನ್ನ ತಾತ ಡೊಳ್ಳಹನುಮಂತಪ್ಪ ಎಂದರೆ ಸರಿ. ದಾವಸ್ತಿಗಳು ಭಾಗವಾಗಿರುವ ಬಗ್ಗೆ ದಾಖಲೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ತಹಶಿಲ್ದಾರ್ ಕಛೇರಿಯಲ್ಲಿ ಆದೇಶವಾಗಿರುತ್ತದೆ ಎಂದು ನುಡಿಯುತ್ತಾರೆ. 1 ರಿಂದ 3 ನೇ ದಾವಾಸ್ತಿಗಳು ಬಸಮ್ಮ ಎಂಬುವವರಿಗೆ ಸೇರಿದ್ದವು ಎಂದರೆ ಸಾಕ್ಷಿಯು ಹೌದು ನನ್ನ ಚಿಕ್ಕಪ್ಪನ ಮಗಳಾದ ಬಸಮ್ಮರವರಿಂದ ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ.

2. ದಿನಾಂಕ 01.08.1989 ರಂದು 1 ರಿಂದ 3 ನೇ ದಾವಾಸ್ತಿಗಳಿಗೆ ಸಂಬಂಧಿಸಿದಂತೆ ಪ್ರತಿವಾದಿಗಳು ಬಸಮ್ಮರವರ ಜೊತೆ ಕ್ರಯದ ಕರಾರು ಪತ್ರ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕರಾರಿನಂತೆ ಪ್ರತಿವಾದಿಗಳು 14,000 ಕ್ಕೆ ಆಸ್ತಿ ಖರೀದಿ ಮಾಡಲು ನಿಗಧಿಪಡಿಸಿಕೊಂಡು 8,000 ಮುಂಗಡ ಹಣ ಪಾವತಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಸಮ್ಮರವರು ಸದರಿ ಆಸ್ತಿಗಳ ಬಗ್ಗೆ ಪ್ರತಿವಾದಿಗಳಿಗೆ ಅಧಿಕಾರ ಪತ್ರವನ್ನು ಸಹ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 4 ನೇ ದಾವಾಸ್ತಿಯನ್ನು ನಾನು ಸದರಿ ಬಸಮ್ಮರವರಿಂದಲೇ ಖರೀದಿ ಮಾಡಿರುತ್ತೇನೆ, ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

3. ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 110(ಎ)/2009 ರಂತೆ ಪ್ರತಿವಾದಿಗಳು ಒಂದು ದಾವೆ ದಾಖಲು ಮಾಡಿದ್ದರು ಎಂದರೆ ಸರಿ. ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 110/2009 ರಂತೆ ನಾನು ಒಂದು ದಾವೆ ದಾಖಲು ಮಾಡಿದ್ದೆ ಎಂದರೆ ಸರಿ. ಸದರಿ ಎರಡು ದಾವೆಗಳು ಈ

ನ್ಯಾಯಾಲಯದಲ್ಲಿ ವಜಾಗೊಂಡಿರುತ್ತವೆ ಎಂದರೆ ಸಾಕ್ಷಿಯು ಬೆಂಗಳೂರಿನ ನ್ಯಾಯಾಲಯದಲ್ಲಿ ನಮ್ಮ ಪರ ಆಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಈ ನ್ಯಾಯಾಲಯದ ತೀರ್ಪಿನ ಮೇಲೆ ಬೆಂಗಳೂರಿನ ನ್ಯಾಯಾಲಯದಲ್ಲಿ ಆರ್.ಎ 49/2010 ರಂತೆ ಮೇಲ್ಮನವಿಯನ್ನು, ನಾನು ಆರ್.ಎ 62/2010 ರಂತೆ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ನಾನು ಮೇಲ್ಮನಳಿಯನ್ನು ಸಲ್ಲಿಸಿಲ್ಲ ಪ್ರತಿವಾದಿಗಳು ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ಆರ್.ಎ 49/2010 ರಲ್ಲಿ ಪ್ರತಿವಾದಿಗಳ ಪರ ತೀರ್ಪು ಆಗಿರುತ್ತದೆ ಎಂದರೆ ಸರಿ. ಸದರಿ ತೀರ್ಪಿನಲ್ಲಿ ಮೂರು ತಿಂಗಳ ಒಳಗೆ ಬಸಮ್ಮರವರು ಪ್ರತಿವಾದಿಗಳಿಗೆ ಕ್ರಯ ಪತ್ರ ಮಾಡಿಕೊಡುವಂತೆ ಆದೇಶವವಾಗಿರುತ್ತದೆ ಎಂದರೆ ಸರಿಯಲ್ಲ . ಮೊದಲಿನಿದಿಂದಲೂ ಪ್ರತಿವಾದಿಗಳೇ 1 ರಿಂದ 3 ನೇ ದಾವಾಸ್ತಿಗಳ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ.

4. ಆರ್.ಎ 62/2010 ರಂತೆ ನಾನು ಸಲ್ಲಿಸಿದ ಮೇಲ್ಮನವಿ ಬೆಂಗಳೂರಿನ ನ್ಯಾಯಾಲಯದಲ್ಲಿ ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ. ಆರ್.ಎ 49/2010 ರ ತೀರ್ಪಿನ ಮೇಲೆ ಮಾನ್ಯ ಉಚ್ಚನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದೇನು. ಮಾನ್ಯಾ ಉಚ್ಚ ನ್ಯಾಯಾಲಯದ ಆದೇಶದಲ್ಲಿ ಸ್ವಾಧೀನ ನಿಮಗೆ ವಹಿಸುವಂತೆ ಆದೇಶವಾಗಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಮಾನ್ಯ ಉಚ್ಚನ್ಯಾಯಾಲಯದ ಆದೇಶದಲ್ಲಿ ಪ್ರತಿವಾದಿಗಳು ಸ್ವಾಧೀನ ಬಿಟ್ಟುಕೊಡುವಂತೆ ಆದೇಶವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು 2016 ನೇ ಸಾಲಿನಲ್ಲಿ ಪ್ರತಿವಾದಿಗಳ ವಿರುದ್ಧ ಪೋಲಿಸರಿಗೆ ದೂರು ನೀಡಿದ್ದೆ ಎಂದರೆ ಸರಿ. ಸದರಿ ದೂರಿನಲ್ಲಿ ಪ್ರತಿವಾದಿಗಳಿಂದ 1 ರಿಂದ 3 ನೇ ದಾವಾಸ್ತಿಗಳ ಸ್ವಾಧೀ ಬಿಡಿಸಿಕೊಡುವಂತೆ ಕೋರಿದ್ದೆ ಎಂದರೆ ಸರಿಯಲ್ಲ.

5. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಮೇಲೆ ಪ್ರತಿವಾದಿಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯ ಸಂಖ್ಯೆ ಸ್ಪೆಷಲ್ ಲಿವ್ ಪಿಟಿಷನ್ ಸಿ.ಸಿ

19448/2016 ರಂತೆ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನನಗೂ ನೋಟಿಸ್ ಬಂದಿದ್ದು ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸ. ಇದೆ.

3 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನೆಲಮಂಗಲ.